# ಕರ್ನಾಟಕ ಸರ್ಕಾರ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,

ಕಾಳಿದಾಸ ಮಾರ್ಗ, ಕೆ.ಜಿ. ರೋಡ್ ಜಂಕ್ಷನ್, ಗಾಂಧಿನಗರ, ಬೆಂಗಳೂರು-560009

**ಪತ್ರ ಸಂಖ್ಯೆ-KPRC-MISC/147/2025-DD8-1888299** **ದಿನಾಂಕ- 30-10-2025**

## ನೇಮಕಾತಿ ಪ್ರಕಟಣೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಕೇಂದ್ರ ಸರ್ಕಾರದ **ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ** ಯೋಜನೆಯಡಿ ಈ ಕೆಳಗೆ ನಮೂದಿಸಿರುವ ಗುತ್ತಿಗೆ ಆಧಾರದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಹುದ್ದೆಯ ಎದುರಾಗಿ ತೋರಿಸಿರುವ ಮಾನದಂಡಗಳನ್ನು ಅನ್ವಯಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಹುದ್ದೆ | ಸಂಖ್ಯೆ | ಮಾಸಿಕ ಸಂಭಾವನೆ | ವಿದ್ಯಾರ್ಹತೆ | ಅನುಭವ | ಸೇವೆಗೆ ಪಡೆಯುವ ಅವಧಿ |
|---|---|---|---|---|---|
| ಸಮಾಲೋಚಕರು (ದಾಖಲೀಕರಣ) | 1 | ರೂ.66,000/- (ಆದಾಯ ತೆರಿಗೆಗಳನ್ನೊಳಗೊಂಡಂತೆ) | Master's Degree- Mass Communication Journalism or Rural Development with experience in report writing and analysis | ಕನಿಷ್ಠ 05 ವರ್ಷಗಳು | 04 ತಿಂಗಳು |
| ಸಮಾಲೋಚಕರು (ಘನ ತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ) | 1 | ರೂ.66,000/- (ಆದಾಯ ತೆರಿಗೆಗಳನ್ನೊಳಗೊಂಡಂತೆ) | Master's Degree – Social Science or B.E Civil/Environmental Engineering. ವಿಷಯಾಧಾರಿತ ಜ್ಞಾನ ಹೊಂದಿರಬೇಕು | ಕನಿಷ್ಠ 10 ವರ್ಷಗಳು | 04 ತಿಂಗಳು |
| ಸಮಾಲೋಚಕರು (ಯೋಜನೆ ಮತ್ತು ಕಾರ್ಯಕ್ರಮಗಳು) | 1 | ರೂ.66,000/- (ಆದಾಯ ತೆರಿಗೆಗಳನ್ನೊಳಗೊಂಡಂತೆ) | Master's Degree in any discipline with Minimum 10 years experience in RD Schemes. | ಕನಿಷ್ಠ 10 ವರ್ಷಗಳು | 04 ತಿಂಗಳು |
| ಡಾಟಾ ವಿಶ್ಲೇಷಕರು (Data Analytics Expert) | 2 | ರೂ.50,000/-(ಆದಾಯ ತೆರಿಗೆಗಳನ್ನೊಳಗೊಂಡಂತೆ) | M.Sc Statistics/Mathematics along with relevant Software knowledge and presentation skills | ಕನಿಷ್ಠ 10 ವರ್ಷಗಳು | 04 ತಿಂಗಳು |

**ಸಮಾಲೋಚಕರ ಜವಾಬ್ದಾರಿಗಳು:**

| | |
|---|---|
| 01. | ಸಮಾಲೋಚಕರು(ದಾಖಲೀಕರಣ)- ಆಯುಕ್ತಾಲಯದಲ್ಲಿ ನಿರ್ವಹಿಸುವ ಕಾರ್ಯಕ್ರಮಗಳನ್ನು ದಾಖಲಿಸಿ ಸರ್ಕಾರ ಹಾಗೂ ಸಭೆಗಳಿಗೆ ವರದಿ ತಯಾರಿಸುವುದು ಹಾಗೂ ಅನುಷ್ಠಾನದ ಕುರಿತು ವಿಶ್ಲೇಷಣಾತ್ಮಕ ವರದಿಗಳು ಅಗತ್ಯಾನುಸಾರ ಸಿದ್ಧಪಡಿಸುವುದು ಮತ್ತು ಅಗತ್ಯಾನುಸಾರ ಆಂಗ್ಲ ಅಥವಾ ಕನ್ನಡ ಭಾಷೆಗಳಲ್ಲಿ ವರದಿ ತಯಾರಿಸುವುದು. |
| 02. | ಸಮಾಲೋಚಕರು(**ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ**)- ವಿಷಯಾಧಾರಿತ ಜ್ಞಾನ ಹೊಂದಿರಬೇಕು. ಕ್ಷೇತ್ರಮಟ್ಟದಲ್ಲಿ ಈ ಕುರಿತು ಇರುವ ಹಾಲಿ ಪರಿಸ್ಥಿತಿ, ಸುಧಾರಣಾ ಕ್ರಮಗಳು, ಜನ ಸ್ನೇಹಿ/ಬಳಕೆ ಸ್ನೇಹಿ ವಿಧಾನಗಳನ್ನು ಕ್ಷೇತ್ರಮಟ್ಟದ ಅಧಿಕಾರಿಗಳಿಗೆ/ನೌಕರರಿಗೆ , ಜನಪ್ರತಿನಿಧಿಗಳಿಗೆ, ಸ್ವ ಸಹಾಯ ಸಂಘಗಳಿಗೆ ಮನದಟ್ಟಾಗುವಂತೆ ವಿಷಯವನ್ನು ತಿಳಿಸುವ ಕುರಿತ ಜವಾಬ್ದಾರಿ. ಗ್ರಾಮ ಪಂಚಾಯತ್‌ನಿಂದ ಜಿಲ್ಲಾ ಹಂತದವರೆಗೂ ಘನ ತ್ಯಾಜ್ಯ ವಿಲೇವಾರಿ ಕುರಿತು ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ, ವರದಿ ತಯಾರಿಸುವುದು ಮತ್ತು ಅಗತ್ಯಾನುಸಾರ ಆಂಗ್ಲ ಅಥವಾ ಕನ್ನಡ ಭಾಷೆಗಳಲ್ಲಿ ವರದಿ ತಯಾರಿಸುವುದು. |
| 03. | ಸಮಾಲೋಚಕರು (**ಯೋಜನೆ ಮತ್ತು ಕಾರ್ಯಕ್ರಮ**)- ಆಯುಕ್ತಾಲಯದಲ್ಲಿ ನಿರ್ವಹಣೆಯಾಗುವ ಯೋಜನೆ/ಕಾರ್ಯಕ್ರಮಗಳ ಕುರಿತ ಮಾಹಿತಿ ಸಂಗ್ರಹಣೆ, ಪ್ರಗತಿ ವರದಿ ಸಿದ್ಧಪಡಿಸುವುದು ಮತ್ತು ಅಗತ್ಯಾನುಸಾರ ಆಂಗ್ಲ ಅಥವಾ ಕನ್ನಡ ಭಾಷೆಗಳಲ್ಲಿ ವರದಿ ತಯಾರಿಸುವುದು. |
| 04. | ದತ್ತಾಂಶ ವಿಶ್ಲೇಷಕರು(Data Anlytics Expert)- ಕಾರ್ಯಕ್ರಮಗಳು – ಆಯುಕ್ತಾಲಯದಲ್ಲಿ ನಿರ್ವಹಣೆಯಾಗುವ ಯೋಜನೆಗಳ ಅನುಷ್ಠಾನ ಸಂಬಂಧ- ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿ ಸಿದ್ಧಪಡಿಸುವುದು, ಆಯವ್ಯಯ ತಯಾರಿಕೆಯಲ್ಲಿ ಸಹಕಾರ ನೀಡುವುದು, ವಿಶ್ಲೇಷಣೆ ಮಾಡುವುದು, ಪ್ರಸ್ತುತಿ ಮಾಡುವುದು ಇತ್ಯಾದಿ ಜವಾಬ್ದಾರಿಗಳು. ಇಲಾಖೆಯ E- Governance ತಂಡದೊಂದಿಗೆ ಸಮನ್ವಯ ಮಾಡುವುದು. ಮತ್ತು ಅಗತ್ಯಾನುಸಾರ ಆಂಗ್ಲ ಅಥವಾ ಕನ್ನಡ ಭಾಷೆಗಳಲ್ಲಿ ಭಾಷೆಗಳಲ್ಲಿ ವರದಿ ತಯಾರಿಸುವುದು. |

**ಸಾಮಾನ್ಯ ಜವಾಬ್ದಾರಿಗಳು:**

| | |
|---|---|
| 01 | ಆಯುಕ್ತಾಲಯದಲ್ಲಿ ನಿರ್ವಹಣೆಯಾಗುವ ಯೋಜನೆ-ಕಾರ್ಯಕ್ರಮಗಳನ್ನು ಅರ್ಥೈಸಿಕೊಂಡು ಅದಕ್ಕೆ ಪೂರಕವಾಗಿ ಕೆಲಸ ನಿರ್ವಹಿಸುವುದು. |
| 02 | ಆಯುಕ್ತಾಲಯದಲ್ಲಿ ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 03 | ಬೇರೆ ಬೇರೆ ಜಿಲ್ಲೆಗಳಿಗೆ ಕರ್ತವ್ಯ ನಿರ್ವಹಣೆ ಸಂಬಂಧ ಪ್ರಯಾಣಿಸುವುದು. |
| 04 | ಸಭೆಗಳಿಗೆ ಮಾಹಿತಿ ಒದಗಿಸುವುದು. |
| 05 | ತಂಡಗಳಲ್ಲಿ ಕೆಲಸ ನಿರ್ವಹಿಸುವುದು. |

ವಯೋಮಿತಿ- ಕನಿಷ್ಠ- 35 ಗರಿಷ್ಠ 55 ವರ್ಷಗಳು

ನೇಮಕಾತಿ ಷರತ್ತುಗಳು: ಉತ್ತಮ ಚಾರಿತ್ರ್ಯ ಹೊಂದಿರಬೇಕು, ಕಡ್ಡಾಯವಾಗಿ ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ಪರಿಣತಿ ಹೊಂದಿರಬೇಕು ಹಾಗೂ ತಂಡವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕು.

ನೇಮಕಾತಿ ವಿಧಾನ- ಲಿಖಿತ ಪರೀಕ್ಷೆ, ಕಂಪ್ಯೂಟರ್ ಸಾಕ್ಷರತೆ ಪರೀಕ್ಷೆ, ಹಾಗೂ ಮೌಖಿಕ ಸಂದರ್ಶನ. ವಿದ್ಯಾರ್ಹತೆ, ಪ್ರಸ್ತುತ ಪಡಿಸುವ ವಿಧಾನ ಮತ್ತು ಅನುಭವಗಳ ಮಾನದಂಡಗಳನ್ನಾಧರಿಸಿ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

ನಿಗದಿ ಪಡಿಸಲಾಗುವ ದಿನಾಂಕ ದಂದು ಆಯುಕ್ತಾಲಯದ ಕಛೇರಿಯಲ್ಲಿ ದಾಖಲಾತಿ ಪರಿಶೀಲನೆ, ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಪ್ರಕ್ರಿಯೆಯನ್ನು ನಡೆಸಲಾಗುವುದು.

Resume/CV may be sent to e-mail-id: rgsa.consultant@gmail.com on or before 07/11/2025 by 5.30pm and shortlisted candidates will be intimated by this office.

**(ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಉಪ ನಿರ್ದೇಶಕರು (ಆಡಳಿತ)**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**

Note: For any queries, please contact no.7406388515/8310055060

**ಪ್ರತಿ:**

1. ಸೂಚನಾ ಫಲಕ
2. KPRC Website